## ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವ – (2011–2014)

### ‘ವಿವೇಕಪ್ರಭ’ ಪತ್ರಿಕೆಯ ವತಿಯಿಂದ

# ವಿವೇಕಸೌರಭ – 2012

### (ವಿಶೇಷ ಆವಾಸೀ ಆಧ್ಯಾತ್ಮಿಕ ಶಿಬಿರ)

**28.9.2012 ರಿಂದ 30.09.2012 ; ಸ್ಥಳಃ ನಂಜರಾಜ ಬಹದ್ದೂರ್ ಛತ್ರ, ಮೈಸೂರು**

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳು ಆಧುನಿಕ ಯುಗದ ಆಧ್ಯಾತ್ಮಿಕ ಜ್ಯೋತಿಗಳಾಗಿವೆ; ಈಗಿನ ಕಾಲದ ಯಾಂತ್ರಿಕ ಜೀವನಕ್ಕೆ ಜೀವಸಂಜೀವಿನಿಗಳಾಗಿವೆ. ಕಷ್ಟಕಾರ್ಪಣ್ಯಗಳಿಂದ ನೊಂದ ಮನಸ್ಸಿಗೆ ಸಾಂತ್ವನವನ್ನೂ, ಧೈರ್ಯವನ್ನೂ, ಆತ್ಮವಿಶ್ವಾಸವನ್ನೂ ನೀಡುವ ಈ ಉದಾತ್ತ ಚಿಂತನೆಗಳನ್ನು ಭಕ್ತರು ಒಟ್ಟಾರೆ ಸೇರಿ ಮನನ ಮಾಡುವ ಆವಶ್ಯಕತೆ ಇದೆ. ಆ ಸುಸಂದರ್ಭ ಈಗ ಒದಗಿಬಂದಿದ್ದು, ಈ ಉದ್ದೇಶಕ್ಕಾಗಿಯೇ ವಿವೇಕಪ್ರಭ ಪತ್ರಿಕೆಯ ವತಿಯಿಂದ, ಸ್ವಾಮಿ ವಿವೇಕಾನಂದರ 150ನೇ ಜನ್ಮಜಯಂತಿ ಮಹೋತ್ಸವದ ಅಂಗವಾಗಿ **‘ವಿವೇಕ ಸೌರಭ – 2012’** ಅನ್ನು ಆಯೋಜಿಸಲಾಗಿದೆ.



ಮೂರು ದಿನಗಳ ಈ ಸಮಾವೇಶದಲ್ಲಿ **ದಿವ್ಯತ್ರಯರ, ಅದರಲ್ಲೂ ಸ್ವಾಮಿ ವಿವೇಕಾನಂದರ ಜೀವನ–ಸಂದೇಶಗಳ ಆಲೋಚನೆ, ಶಾಸ್ತ್ರಗಳ ಬಗ್ಗೆ ತಿಳಿವಳಿಕೆ, ಧ್ಯಾನದ ಆಚರಣೆಯ ಬಗ್ಗೆ ಅರಿವು, ದೈನಂದಿನ ಜೀವನದಲ್ಲಿ ಅಧ್ಯಾತ್ಮವನ್ನು ಅಳವಡಿಸಿಕೊಳ್ಳುವುದು ಹೇಗೆ?** – ಈ ವಿಷಯಗಳ ಬಗ್ಗೆ ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳು ಮಾರ್ಗದರ್ಶನ ಮಾಡುವರು. ಹಾಗೆಯೇ ನಾಡಿನ ಸುಪ್ರಸಿದ್ಧ ಭಾಷಣಕಾರರಿಂದ ಉದ್ಬೋಧಕ ಪ್ರವಚನಗಳು, ಯಕ್ಷಗಾನ, ಅಧ್ಯಾತ್ಮ ಪ್ರವಚನ–ಗಾನಸುಧೆ – ಇವೂ ಆಯೋಜಿತವಾಗಿವೆ. ಅದಲ್ಲದೆ ಪ್ರಸಿದ್ಧ ಗಾಯಕರಿಂದ ದೈನಂದಿನ ಭಜನೆಯ ಜೊತೆಗೆ, ಭಾಷಣಗಳ ಮಧ್ಯೆ ‘ನಾಮಸಂಕೀರ್ತನೆ’ ಕಾರ್ಯಕ್ರಮವೂ ಇರುತ್ತದೆ. ಈ ಸಮಾವೇಶದಲ್ಲಿ ರಾಮಕೃಷ್ಣ ಮಹಾಸಂಘವು ಕರ್ನಾಟಕದಲ್ಲಿ ಹೊರತರುತ್ತಿರುವ ಏಕೈಕ ಪತ್ರಿಕೆಯಾದ ‘ವಿವೇಕಪ್ರಭ’ದ ಪ್ರಚಾರದ ಬಗ್ಗೆಯೂ ಸಮಾಲೋಚನೆ ನಡೆಯುವುದು.

ನಂಜರಾಜ ಬಹದ್ದೂರ್ ಛತ್ರವು ಊರಿನ ಮಧ್ಯ ಭಾಗದಲ್ಲಿದ್ದು, ಅಲ್ಲಿಯೇ ಸಮಾರಂಭದ ಮತ್ತು ಊಟ ವಸತಿ ಗಳ ಏರ್ಪಾಡು ಇರುತ್ತದೆ. ವಿಶಾಲವಾದ ಸ್ಥಳ, ವಸತಿ ವ್ಯವಸ್ಥೆಯನ್ನು ಈ ಛತ್ರ ಹೊಂದಿದೆ. 800–1000 ಜನರಿಗೆ ಇಲ್ಲಿ ಊಟವಸತಿಗಳ ಸೌಕರ್ಯ ಮಾಡಬಹುದಾಗಿದೆ.

1. **ಕಾಣಿಕೆ :** ವಸತಿ ಸಹಿತ : ರೂ.600/– ಮಾತ್ರ ; ವಸತಿ ರಹಿತ : ರೂ.450/– ಮಾತ್ರ.
2. ಶಿಬಿರಾರ್ಥಿಗಳು 28.09.2012 (ಶುಕ್ರವಾರ) ಮಧ್ಯಾಹ್ನ ಒಂದು ಗಂಟೆಯ ಒಳಗೆ ಛತ್ರಕ್ಕೆ ಬರಬೇಕು ಮತ್ತು 30.09.2012 ರಂದು (ಭಾನುವಾರ) ಮಧ್ಯಾಹ್ನ 3.30 ರ ನಂತರ ತೆರಳಬಹುದು. ವಸತಿ ರಹಿತ ಅಭ್ಯರ್ಥಿಗಳು ಪ್ರತಿನಿತ್ಯ ಕಾರ್ಯಕ್ರಮಕ್ಕೆ ಬಂದು ತದನಂತರ ಮನೆಗೆ ತೆರಳಬಹುದು.
3. ಆಸಕ್ತರು, ಭಾಗವಹಿಸುವ ಪ್ರತಿ ವ್ಯಕ್ತಿಗೆ ರೂ.600/– ಅನ್ನು ಡಿ.ಡಿ. ಕಳುಹಿಸಿ ನೋಂದಾಯಿಸಿಕೊಳ್ಳಬಹುದು. ಅವರಿಗೆ 10 ರಸೀದಿಗಳು ಇರುವ ಒಂದು ರಸೀದಿಪುಸ್ತಕವನ್ನು ಕಳಿಸಲಾಗುವುದು. ಅವರು ಆಗಸ್ಟ್ 30 ರ ಒಳಗೆ ವಿವೇಕಪ್ರಭ ಚಂದಾ ಮಾಡಿಸಲು ಪ್ರಯತ್ನಿಸಬೇಕು. ಆಗಸ್ಟ್ 30 ರ ನಂತರ ಚಂದಾಹಣವನ್ನು ಕಳುಹಿಸಿದರೆ, ತಮಗೆ ಸೂಚನಾಪತ್ರವನ್ನು ಅಂಚೆಯ ಮೂಲಕ ಕಳಿಸಲಾಗುವುದು. ಅದು ಸಾಧ್ಯವಾಗದಿದ್ದರೂ, ಆದ್ಯತೆಯ ಪ್ರಕಾರ ನಿಮಗೆ ಶಿಬಿರಕ್ಕೆ ಬರಬೇಕಾದ ಸೂಚನೆಯನ್ನು ತಲುಪಿಸಲಾಗುವುದು. ‘ವಿವೇಕಪ್ರಭ’ ಚಂದಾ ಮಾಡಿಸುವುದನ್ನು ಈ ಸಮಾವೇಶಕ್ಕೆ ಆದ್ಯತೆಯೆಂದು ಪರಿಗಣಿಸಲಾಗುವುದೇ ಹೊರತು ಇದು ನಿರ್ಬಂಧವಲ್ಲ.
4. ಒಟ್ಟು ಕೇವಲ 800 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿರುವುದರಿಂದ ಒಡನೆಯೇ ಹಣ ಕಳುಹಿಸಿ, ನೋಂದಾಯಿಸಿಕೊಳ್ಳಿ.
5. ಹಣವನ್ನು ಕೇವಲ ಡಿ.ಡಿ. ಮೂಲಕ **‘Sri Ramakrishna Ashrama, Viveka Prabha A/c’** ಹೆಸರಿಗೆ ಕಳಿಸಬೇಕು. ಲಕೋಟೆಯ ಮೇಲೆ **“ವಿವೇಕಪ್ರಭ ಭಕ್ತ ಸಮಾವೇಶ – 2012’** ಎಂದು ನಮೂದಿಸಿರಬೇಕು. ಪತ್ರದಲ್ಲಿ ಹೆಸರು, ವಿಳಾಸ, ಮೊಬೈಲ್ ನಂಬರ್, ಇ–ಮೈಲ್ ವಿಳಾಸ, ವಯಸ್ಸುಗಳನ್ನು ನಮೂದಿಸಬೇಕು. ಒಂದೇ ಪತ್ರದಲ್ಲಿ ಎಷ್ಟು ಜನರನ್ನು ಬೇಕಾದರೂ ನಮೂದಿಸಬಹುದು ಹಾಗೂ ಒಟ್ಟು ಹಣವನ್ನು ಒಂದೇ ಡಿ.ಡಿ.ಯ ಮೂಲಕ ಕಳಿಸಬಹುದು.
6. ಹೋಟೆಲ್ ಕೊಠಡಿ ವ್ಯವಸ್ಥೆ ಇಚ್ಛಿಸುವವರು ಬರೆದು ತಿಳಿಸಿದರೆ, ಅವರಿಗೆ ಮಾಹಿತಿ ಪತ್ರ ಕಳಿಸಲಾಗುವುದು.
7. ದೀರ್ಘಕಾಲದ ಕಾಯಿಲೆಗಳಿಂದ ನರಳುತ್ತಿರುವವರು ಭಾಗವಹಿಸದಿರುವುದು ಒಳ್ಳೆಯದು.
8. ಡಿ.ಡಿ. ಮತ್ತು ಪತ್ರವನ್ನು ಕಳಿಸಬೇಕಾದ ವಿಳಾಸ :
   ‘ವಿವೇಕಪ್ರಭ ಭಕ್ತ ಸಮಾವೇಶ – 2012’
   ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ,
   ಮೈಸೂರು – 570 020

ಸಂಪಾದಕೀಯ



# ವೇದಾಂತದ ಅನುಷ್ಠಾನ ಮಾನವತೆಗೊಂದು ವರದಾನ



**ಸ್ವಾ**ಮಿ ವಿವೇಕಾನಂದರು ವೇದಾಂತ ಸಿದ್ಧಾಂತವನ್ನು ಪಾಶ್ಚಾತ್ಯ ದೇಶಗಳಲ್ಲಿ ಅತ್ಯಂತ ಪ್ರಭಾವಯುತವಾಗಿ ಪ್ರತಿಪಾದಿಸಿದರು. ಹಾಗೆಯೇ ವೇದಾಂತವು ನಿತ್ಯಜೀವನದಲ್ಲಿ ಅನುಷ್ಠಾನಕ್ಕೆ ಯೋಗ್ಯವೆಂದೂ, ಅದು ಮಾತ್ರವೇ ಉತ್ಕೃಷ್ಟ ಸಮಾಜವನ್ನು ನಿರ್ಮಿಸಬಲ್ಲುದೆಂದೂ ಬೋಧಿಸಿದರು. ಈ ನಿಟ್ಟಿನಲ್ಲಿ ಅವರು **'ಅನುಷ್ಠಾನ ವೇದಾಂತ'** ಎಂಬ ಶೀರ್ಷಿಕೆಯ ನಾಲ್ಕು ಉಪನ್ಯಾಸಗಳನ್ನು ಲಂಡನ್ನಿನಲ್ಲಿ ೧೮೯೬, ನವೆಂಬರ್ ೧೦ ರಿಂದ ೧೮ರವರೆಗಿನ ಅವಧಿಯಲ್ಲಿ ನೀಡಿದ್ದಾರೆ. ಅದ್ವೈತ ಸಿದ್ಧಾಂತವು ಹೇಗೆ ಜೀವದಾಯಿಯಾದ, ಚೇತೋಹಾರಿಯಾದ ಅನುಷ್ಠಾನ ವಿಧಾನವಾಗಿದೆ ಎನ್ನುವುದನ್ನು ಸ್ವಾಮೀಜಿ ಬಹಳ ಉನ್ನತಸ್ತರದ ವೈಚಾರಿಕ ನಿಲುವಿನಲ್ಲಿ ನಿಂತು ಈ ಉಪನ್ಯಾಸಗಳಲ್ಲಿ ಬೋಧಿಸುವರು. ಮೇಲುನೋಟಕ್ಕೆ ಕ್ಲಿಷ್ಟವಾಗಿ ಕಂಡರೂ, ಆಳವಾದ ಓದು, ಚಿಂತನೆಗಳ ಮೂಲಕ ಇವನ್ನು ತಿಳಿದುಕೊಳ್ಳಲು ಪ್ರಯತ್ನಪಟ್ಟಾಗ ವೇದಾಂತ, ಅದರಲ್ಲೂ ಅದ್ವೈತ ತತ್ತ್ವವು, ನಮ್ಮ ಜೀವನವನ್ನು ಹೇಗೆ ಅರ್ಥಪೂರ್ಣ ಹಾಗೂ ಸುಸಂಪನ್ನವಾಗಿ ಮಾಡಬಲ್ಲುದು ಎನ್ನುವುದು ತಿಳಿದುಬರುತ್ತದೆ. ಸ್ವಾಮಿ ವಿವೇಕಾನಂದರು 'ಅನುಷ್ಠಾನ' ಎಂಬ ಪರಿಕಲ್ಪನೆಗೆ 'ಆಚರಣೆ' ಅಥವಾ 'ಪೂಜಾಪದ್ಧತಿ' ಎಂಬ ಸಾಧಾರಣ ಅರ್ಥವನ್ನು ಈ ಪ್ರವಚನಗಳಲ್ಲಿ ನೀಡಿಲ್ಲ. ಅದಕ್ಕೆ ಬದಲಾಗಿ, ನಾವು ಇದುವರೆಗೂ ನೆಚ್ಚಿಕೊಂಡಿರುವ ಮೌಢ್ಯ, ಕುರುಡು ನಂಬಿಕೆ, ಬರಡು ಆಚಾರ, ಕ್ಷುಲ್ಲಕ ಭಯ, ಅಪನಂಬಿಕೆ, ದೌರ್ಬಲ್ಯಗಳನ್ನು ನಿವಾರಿಸಿಕೊಳ್ಳುವ ಮೂಲಭೂತ ಕಾರ್ಯಕ್ಕೆ ಅವರು ಹೆಚ್ಚು ಮಹತ್ವವನ್ನು ನೀಡುತ್ತಾರೆ. ಅತ್ಯುನ್ನತವಾದ ವೇದಾಂತತತ್ತ್ವದ ಪ್ರಜ್ವಲ ಬೆಳಕಿನಲ್ಲಿ ನಮ್ಮ ಬಾಳಿನ ಸಮಸ್ತವನ್ನೂ ರೂಪಿಸಿಕೊಂಡು, ದಿವ್ಯತೆಯ ಅನುಭವವನ್ನು ಪಡೆದುಕೊಳ್ಳುವಂತೆ ಕರೆಕೊಡುತ್ತಾರೆ.

**ವೇದಾಂತವು ಬೋಧಿಸುವ ಕಾರ್ಯವಿಧಾನ:** ಸ್ವಾಮೀಜಿ ಅನುಷ್ಠಾನ ವೇದಾಂತದ ತಮ್ಮ ಮೊದಲ ಪ್ರವಚನವನ್ನು ಆರಂಭಿಸುವುದು ಹೀಗೆ: "ವೇದಾಂತ ಸಿದ್ಧಾಂತವೇನೋ ಬಹಳ ಚೆನ್ನಾಗಿದೆ. ಆದರೆ ಅದನ್ನು ಅನುಷ್ಠಾನಕ್ಕೆ ತರುವುದು ಹೇಗೆ ? ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲದೇ ಇದ್ದರೆ ಯಾವ ಸಿದ್ಧಾಂತದಿಂದಲೂ ಏನೂ ಪ್ರಯೋಜನವಿಲ್ಲ. ಅದು ಕೇವಲ ಒಂದು ಬುದ್ಧಿವಂತಿಕೆಯ ಕಸರತ್ತಾಗಬಹುದು. ಆದಕಾರಣ ವೇದಾಂತವು ಧಾರ್ಮಿಕ ದೃಷ್ಟಿಯಿಂದ ಸಂಪೂರ್ಣ ಅನುಷ್ಠಾನಸಾಧ್ಯವಾಗಬೇಕು. ನಮ್ಮ ಜೀವನದ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ಇದನ್ನು ಅನುಷ್ಠಾನಕ್ಕೆ ತರಲು ನಮಗೆ ಸಾಧ್ಯವಾಗಬೇಕು. ಇದೊಂದೇ ಅಲ್ಲ, ಆಧ್ಯಾತ್ಮಿಕ ಜೀವನ ಮತ್ತು ವ್ಯಾವಹಾರಿಕ ಜೀವನಗಳ ಮಧ್ಯೆ ಇರುವ ಕಾಲ್ಪನಿಕ ಭೇದಭಾವ ಮಾಯವಾಗಬೇಕು." ಸ್ವಾಮಿ ವಿವೇಕಾನಂದರು ಈ ಪ್ರವಚನಗಳ ಮೂಲಕ ತಾವು ಏನನ್ನು ಕೈಗೊಳ್ಳಲು ಬಯಸುತ್ತಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುವುದು. ಅವರ ವಿಧಾನವೆಂದರೆ, ಮೊದಲು ಸಿದ್ಧಾಂತವನ್ನು ತಿಳಿದುಕೊಳ್ಳುವುದು, ಅನಂತರ ಅರಣ್ಯಗಳಿಂದ ಹಿಡಿದು ದೊಡ್ಡದೊಂದು ನಗರದ ಗಡಿಬಿಡಿಯ ದಾರಿಗಳಲ್ಲೂ ಅದು ಹೇಗೆ ಅನುಷ್ಠಾನಸಾಧ್ಯ ಎನ್ನುವುದನ್ನು ಅರಿತುಕೊಳ್ಳುವುದು.

ಮುಖ್ಯವಾಗಿ ಉಪನಿಷತ್ತುಗಳಲ್ಲಿ ಕಂಡುಬರುವ ಈ ಸಿದ್ಧಾಂತವು ಕಾಡಿನ ವಿರಾಮಜೀವನದಲ್ಲಿ ಇರುತ್ತಿದ್ದ ಮುನಿಗಳಿಂದ ಬಂದುದಲ್ಲ. ಅದಕ್ಕೆ ಬದಲಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದ ರಾಜರುಗಳ ಚಿಂತನೆಯ ಫಲಶ್ರುತಿ ಎಂಬುದನ್ನು ಸ್ವಾಮೀಜಿ ನಮಗೆ ನೆನಪಿಸುತ್ತಾರೆ. ಹೀಗಾಗಿ ವೇದಾಂತದ ಅನುಷ್ಠಾನಯೋಗ್ಯತೆಯನ್ನು ಪ್ರಶ್ನಿಸಲಾಗದು. ಈ ಸಂಗತಿಯು ಭಗವದ್ಗೀತೆಯ ಬೋಧನೆಯ ಹಿನ್ನೆಲೆಯನ್ನು ಗಮನಿಸಿದಾಗ ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ರಣರಂಗದ ಆರ್ಭಟದ ಮಧ್ಯದಲ್ಲಿ ಭಗವದ್ಗೀತೆಯನ್ನು ಬೋಧಿಸಲಾಯಿತು ಎನ್ನುವುದು ನಮಗೆಲ್ಲರಿಗೂ ತಿಳಿದ ವಿಷಯ. ಹೀಗಾಗಿ ಸ್ವಾಮೀಜಿ ಹೇಳುತ್ತಾರೆ, ವೇದಾಂತದ ಗುರಿ ಕರ್ಮವು ಶಾಂತಿಯೊಡನೆ ಕಲೆತಿರುವುದು. ಆ ಶಾಂತಿಗೆ ಯಾವತ್ತೂ ಭಂಗ ಬರಕೂಡದು. ಮನಸ್ಸಿನ ಸಮತ್ವಕ್ಕೆ ಯಾವತ್ತೂ ತಡೆಯುಂಟಾಗಬಾರದು. ವೇದಾಂತದ ಪ್ರಕಾರ ಇದೇ ಕಾರ್ಯಮಾಡುವ ಉತ್ತಮ ಸ್ಥಿತಿ. ಇದು ಬರುವುದು, ನಾವು ಆಸೆಗಳನ್ನು ಕಡಿಮೆ ಮಾಡಿಕೊಂಡಾಗ ಮಾತ್ರ. ಆಸಕ್ತಿ ಕಡಿಮೆಯಾದಷ್ಟು ನಾವು ಉತ್ತಮವಾಗಿ ಕೆಲಸ ಮಾಡುತ್ತೇವೆ. ಶಾಂತವಾಗಿದ್ದಷ್ಟೂ ನಾವು ಹೆಚ್ಚು ಕೆಲಸವನ್ನು ಮಾಡಲು ಸಾಧ್ಯ. ಭಾವನೆಯ ಉದ್ವೇಗ ನಮ್ಮ ಮಾನಸಿಕ ಶಕ್ತಿಯನ್ನು ಪೋಲು ಮಾಡುತ್ತದೆ. ಹೀಗಾಗಿ ಜಗತ್ತಿನಲ್ಲಿ ಪ್ರಚಂಡ ಕಾರ್ಯವನ್ನು ಎಸಗಿದವರು ಅದ್ಭುತವಾದ ಶಾಂತ ಜೀವಿಗಳು ಎನ್ನುವುದನ್ನು ಇತಿಹಾಸದಲ್ಲಿ ಕಾಣಬಹುದು. ಯಾವ ಮನುಷ್ಯ ಕೋಪ, ಅಸೂಯೆ ಮುಂತಾದ ಕೀಳು ಗುಣಗಳ ದಾಸನಾಗಿರುತ್ತಾನೋ ಅವನು ಸರಿಯಾಗಿ ಕೆಲಸ ಮಾಡಲಾರ. ಯಾರು ಶಾಂತರೋ, ಕ್ಷಮಾಶೀಲರೋ, ಎಲ್ಲರಲ್ಲೂ ಸಮತ್ವಭಾವವುಳ್ಳವರೋ ಅವರೇ ಹೆಚ್ಚು ಕೆಲಸ ಮಾಡುತ್ತಾರೆ. ಇದೇ ವೇದಾಂತವು ಬೋಧಿಸುವ ಕಾರ್ಯವಿಧಾನ.

**ವೇದಾಂತದ ಆದರ್ಶ:** ಆದರ್ಶವೆನ್ನುವುದು ನಮ್ಮ ಇಂದಿನ ನಿಜಸ್ಥಿತಿಗಿಂತ ಉನ್ನತವಾಗಿರುತ್ತದೆ. ಮಾನವನಲ್ಲಿ ಎರಡು ಸ್ವಭಾವಗಳಿರುತ್ತವೆ: ೧. ಆದರ್ಶವನ್ನು ನಮ್ಮ ಜೀವನದೊಂದಿಗೆ ರಾಜಿಮಾಡಿಕೊಳ್ಳುವುದು. ೨. ನಮ್ಮ ಜೀವನವನ್ನು ಆದರ್ಶದ ಮಟ್ಟಕ್ಕೆ ಏರಿಸುವುದು. ಮೊದಲನೆಯದು ನಮ್ಮನ್ನು ಮೋಹಪಾಶಕ್ಕೆ ಈಡುಮಾಡುತ್ತದೆ. ಎರಡನೆಯದು ಮಾತ್ರವೇ ನಮ್ಮನ್ನು ಶ್ರೇಷ್ಠ ಮನುಷ್ಯರನ್ನಾಗಿ ಮಾಡುತ್ತದೆ. ವೇದಾಂತವು ಅಸಾಧ್ಯವಾದ ಆದರ್ಶವನ್ನು ಬೋಧಿಸುವುದಿಲ್ಲ. ಆದರೆ ಆ ಆದರ್ಶ ಅತ್ಯಂತ ಉನ್ನತವಾಗಿದೆ. ಸ್ವಾಮೀಜಿ ಹೇಳುತ್ತಾರೆ, "ಒಂದೇ ಮಾತಿನಲ್ಲಿ ಹೇಳುವುದಾದರೆ ನೀವು ಪವಿತ್ರರೆಂಬುದೇ ಆ ಆದರ್ಶ. 'ತತ್ತ್ವಮಸಿ' – ಇದೇ ವೇದಾಂತದ ಸಾರ... ನಾವು ಯಾವುದನ್ನು ಬೇಕಾದರೂ ಮಾಡಬಲ್ಲೆವು. ಅದಕ್ಕಾಗಿ ಮೊದಲು ನಿಮ್ಮಲ್ಲಿ ಶ್ರದ್ಧೆಯನ್ನು ಇಟ್ಟುಕೊಳ್ಳಿ ಎಂದು ವೇದಾಂತವು ಬೋಧಿಸುತ್ತದೆ." ಯಾವ ತೆರನ ಸಾಮಾಜಿಕ ಭೇದವೂ ಈ ಆದರ್ಶದ ಸಾಕ್ಷಾತ್ಕಾರಕ್ಕೆ ಅಡಚಣೆ ತರಲಾರದು. ಏಕೆಂದರೆ, ಪರಿಪೂರ್ಣ ಪವಿತ್ರತೆಯ ಈ ಆದರ್ಶ ನಮ್ಮಲ್ಲೇ ಅಂತರ್ಗತವಾಗಿದೆ, ಅದನ್ನು ಬೇರೆ ಎಲ್ಲಿಂದಲೋ ಗಳಿಸಿಕೊಳ್ಳುವ ಆವಶ್ಯಕತೆ ಇಲ್ಲ. ಇದೇ ವೇದಾಂತದ ನಿಲುವು. ಹೀಗಾಗಿ ವೇದಾಂತದ ಆದರ್ಶ ಕೇವಲ ಸಾಧ್ಯವಷ್ಟೇ ಅಲ್ಲ, ಅದು ಎಂದೆಂದಿಗೂ ಇದ್ದುದು ಹೀಗೆಯೇ. ಆ ಸತ್ಯವೇ, ಆ ಆದರ್ಶವೇ ಮಾನವರೆಲ್ಲರ ನಿಜವಾದ ಸ್ವಭಾವ. ಹೀಗಾಗಿ ವೇದಾಂತ ಯಾವ ಪಾಪವನ್ನೂ ಒಪ್ಪಿಕೊಳ್ಳುವುದಿಲ್ಲ, ತಪ್ಪನ್ನು ಮಾತ್ರ ಒಪ್ಪಿಕೊಳ್ಳುವುದು. ಒಬ್ಬನು ತಾನು ದುರ್ಬಲನೆಂದೂ, ಪಾಪಿಯೆಂದೂ, ಕೆಲಸಕ್ಕೆ ಬಾರದವನೆಂದೂ ತಿಳಿದುಕೊಳ್ಳುವುದೇ ಅತ್ಯಂತ ಘೋರತಮವಾದ ತಪ್ಪೆಂದು ವೇದಾಂತ ಸಾರುತ್ತದೆ. ಆದರೆ ಅಂತಹ ದುರ್ಬಲ ಜೀವನ ನಮ್ಮದು. ಹೀಗೆ ಜೀವನದಲ್ಲಿ ಆದರ್ಶದೊಂದಿಗೆ ರಾಜಿ ಮಾಡಿಕೊಳ್ಳುವ ಪ್ರಯತ್ನವನ್ನು ವೇದಾಂತವು ಎಂದೆಂದಿಗೂ ಒಪ್ಪುವುದಿಲ್ಲ. ಸ್ವಾಮೀಜಿಯವರ ಮಾತುಗಳಲ್ಲಿ ಹೇಳುವುದಾದರೆ, "ಕಪಟ ಜೀವನವು ಮಾಯವಾಗಬೇಕು. ಅನಾದಿಯಿಂದಲೂ ಇರುವ ಸತ್ಯಜೀವನವು ಹೊರಗೆ ಬರಬೇಕು, ಕಂಗೊಳಿಸಬೇಕು. ಪ್ರತಿ ಮಾನವನೂ ಹೆಚ್ಚು ಹೆಚ್ಚು ಪವಿತ್ರನಾಗುವುದಷ್ಟೇ ಅಲ್ಲ, ಹೆಚ್ಚು ಹೆಚ್ಚು ಪಾವಿತ್ರ್ಯವನ್ನು ವ್ಯಕ್ತಗೊಳಿಸಬೇಕು. ಆಗ ಮೋಹದ ತೆರೆಯು ಜಾರುತ್ತದೆ, ಆತ್ಮದ ಆಜನ್ಮ ಪಾವಿತ್ರ್ಯವು ಪ್ರಕಾಶಕ್ಕೆ ಬರುತ್ತದೆ. ಅಂತಹ ಪಾವಿತ್ರ್ಯ, ಸ್ವಾತಂತ್ರ್ಯ, ಪ್ರೇಮ ಮತ್ತು ಶಕ್ತಿಗಳೆಲ್ಲ ಈಗಾಗಲೇ ನಮ್ಮಲ್ಲಿವೆ." ಇವುಗಳನ್ನು ಕಾಡಿನಲ್ಲಿರುವ ಧ್ಯಾನಶೀಲರು ಸಾಕ್ಷಾತ್ಕರಿಸಿಕೊಳ್ಳುವುದು ಮಾತ್ರವಲ್ಲ, ಜೀವನದ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿರುವ ಜನರಿಂದಲೂ ಇದು ಸಾಧ್ಯವೆಂದು ವೇದಾಂತ ಬೋಧಿಸುತ್ತದೆ.

**ಏಕತ್ವವೇ ವೇದಾಂತದ ಆದರ್ಶ:** ಇರುವುದು ಒಂದೇ ಜೀವನ, ಒಂದೇ ಜಗತ್ತು, ಎಲ್ಲವೂ ಅದೊಂದೇ. ವ್ಯತ್ಯಾಸವಿರುವುದು ಪ್ರಮಾಣದಲ್ಲಲ್ಲದೆ, ಸ್ವಭಾವದಲ್ಲಲ್ಲ – ಇದು ವೇದಾಂತವು ಬೋಧಿಸುವ ಏಕತೆಯ ಆದರ್ಶ. ಅದರ ಪ್ರಕಾರ, ಜೀವನದ ಅತ್ಯುತ್ತಮ ಆದರ್ಶದ ದೃಷ್ಟಿಯಿಂದ ಅತಿ ತುಚ್ಛ ಪ್ರಾಣಿಯೂ ಒಂದೇ, ಅತಿ ಶ್ರೇಷ್ಠ ಮಾನವನೂ ಒಂದೇ. ಈ ಆದರ್ಶದ ಬೆಳಕಿನಲ್ಲಿ ಮಾತ್ರವೇ ನಿಜವಾದ ಮಾನವ ಸಹೋದರತ್ವ ಸಾಧ್ಯ.

ಈ ಆದರ್ಶವನ್ನು ನಾವು ಈಗಿರುವ ಸ್ಥಿತಿಗೆ ಇಳಿಸಬಾರದು ಎಂದು ಸ್ವಾಮೀಜಿ ಎಚ್ಚರಿಸುತ್ತಾರೆ. ನಾವು ಆದರ್ಶದ ಸಿದ್ಧಿಗಾಗಿ ಹೋರಾಡಬೇಕು, ನಮ್ಮನ್ನು ನಾವು ಇಂದ್ರಿಯಸುಖದ ದಾಸರನ್ನಾಗಿ ಮಾಡಿಕೊಳ್ಳಬಾರದು, ದೈವತ್ವದ ಪೀಠಕ್ಕೆ ನಮ್ಮನ್ನು ನಾವು ಏರಿಸಿ ಕೊಳ್ಳಬೇಕು. ಆದರೆ ಈ ಪ್ರಯತ್ನದಲ್ಲಿ ಹಿಂದುಳಿದಿರುವವರನ್ನು ಯಾವ ಕಾರಣಕ್ಕೂ ನಿಕೃಷ್ಟದೃಷ್ಟಿಯಿಂದ ನೋಡಬಾರದು. ಏಕೆಂದರೆ ಶಕ್ತಿಗೂ ದುರ್ಬಲತೆಗೂ, ಪಾಪಕ್ಕೂ ಪುಣ್ಯಕ್ಕೂ, ಸ್ವರ್ಗಕ್ಕೂ ನರಕಕ್ಕೂ ಇರುವ ವ್ಯತ್ಯಾಸ ಕೇವಲ ತರತಮದಲ್ಲಿ ಮಾತ್ರ, ವಸ್ತುಭೇದದಲ್ಲಲ್ಲ. ಏಕೆಂದರೆ, ಏಕತ್ವವೇ ಸಕಲವಸ್ತುಗಳ ಅಂತರ್ಯದ ರಹಸ್ಯ.

**ವೇದಾಂತದ ನೈತಿಕ ತತ್ತ್ವಗಳು:** ಈ ಹಿನ್ನೆಲೆಯಲ್ಲಿ ವೇದಾಂತವು ಬೋಧಿಸುವ ನೈತಿಕ ತತ್ತ್ವಗಳನ್ನು ನಾವು ಅರ್ಥಮಾಡಿಕೊಳ್ಳಬಹುದು. ಸ್ವಾಮೀಜಿ ಹೀಗೆ ಹೇಳುತ್ತಾರೆ: "ಯಾರನ್ನೂ ಧಿಕ್ಕರಿಸಬೇಡಿ. ನಿಮಗೆ ಸಹಾಯ ಮಾಡಲು ಸಾಧ್ಯವಾದರೆ ಕೈ ಎತ್ತಿ. ಇಲ್ಲದೆ ಇದ್ದರೆ ಕೈಗಳನ್ನು ಜೋಡಿಸಿ ನಿಮ್ಮ ಸಹೋದರರನ್ನು ಹರಸಿ... ಇನ್ನೊಬ್ಬರಲ್ಲಿ ತಪ್ಪು ಕಂಡುಹಿಡಿಯುವುದು, ಇನ್ನೊಬ್ಬರನ್ನು ಅಲ್ಲ ಗಳೆಯುವುದು– ಇವುಗಳೆಲ್ಲ ನಿರರ್ಥಕ." ಹಾಗೆಯೇ ವೇದಾಂತವು ಶಕ್ತಿಯ ಭಾವನೆಗೆ ಬಹಳ ಪ್ರಾಮುಖ್ಯತೆ ನೀಡುತ್ತದೆ. ಸರ್ವದಾ ನಿರ್ಬಲತೆಯನ್ನು ಮೆಲುಕು ಹಾಕುವುದರಿಂದ ಶಕ್ತಿ ಬರುವುದಿಲ್ಲ. ದುರ್ಬಲತೆಗೆ ಪರಿಹಾರ ದೌರ್ಬಲ್ಯವನ್ನು ಕುರಿತು ಚಿಂತಿಸುವುದಲ್ಲ, ಅದಕ್ಕೆ ಬದಲಾಗಿ ಶಕ್ತಿಯನ್ನು ಕುರಿತು ವಿಚಾರ ಮಾಡುವುದು. ಇದೇ ತೆರನಾಗಿ ಪಾಪದ ವಿಚಾರದಲ್ಲೂ ವೇದಾಂತವು ಕ್ರಾಂತಿ ಕಾರಕ ದೃಷ್ಟಿಯನ್ನೇ ತಾಳುವುದು. "ನೀವು ಶುದ್ಧರು, ಪೂರ್ಣರು; ಯಾವುದನ್ನು ಪಾಪವೆನ್ನುವಿರೋ ಅದು ನಿಮಗೆ ಸೇರಿದ್ದಲ್ಲ" ಎಂದು ವೇದಾಂತವು ಬೋಧಿಸುವುದು. ವೇದಾಂತದ ಪ್ರಕಾರ ಪಾಪವೆಂಬುದು ಪರಿಶುದ್ಧಾತ್ಮದ ಅತ್ಯಂತ ನೀಚ ಅಭಿವ್ಯಕ್ತಿ ಮಾತ್ರ. ಹಾಗೆಯೇ ಆತ್ಮಶ್ರದ್ಧೆಗೆ ವೇದಾಂತ ತುಂಬ ಮಹತ್ವವನ್ನು ನೀಡುವುದು. ಸ್ವಾಮೀಜಿ ಹೇಳುತ್ತಾರೆ, "ನಮ್ಮಲ್ಲಿ ನಮಗೆ ನಂಬಿಕೆಯನ್ನು ಹೆಚ್ಚು ಬೋಧಿಸಿದ್ದರೆ, ಅದನ್ನು ನಾವು ಅನುಷ್ಠಾನಕ್ಕೆ ತಂದಿದ್ದರೆ, ನಮ್ಮಲ್ಲಿರುವ ಅನೇಕ ದೋಷಗಳು ಮತ್ತು ದುಃಖದ ಬಹುಭಾಗ ಮಾಯವಾಗುತ್ತಿದ್ದವು ಎನ್ನುವುದರಲ್ಲಿ ಸಂದೇಹವೇ ಇಲ್ಲ." ಒಬ್ಬ ಮನುಷ್ಯನಿಗೂ ಇನ್ನೊಬ್ಬನಿಗೂ ಇರುವ ವ್ಯತ್ಯಾಸ ಈ ವಿಶ್ವಾಸದ ತರತಮದಲ್ಲಿ ಮಾತ್ರ.

**ವೇದಾಂತದ ಧರ್ಮ:** ಆಧುನಿಕ ಧರ್ಮದ ಪ್ರಕಾರ ಯಾರಿಗೆ ಆತ್ಮವಿಶ್ವಾಸವಿಲ್ಲವೋ ಅವನೇ ನಾಸ್ತಿಕ ಎನ್ನುತ್ತಾರೆ ಸ್ವಾಮೀಜಿ. ಆದರೆ ಇಂತಹ ಆತ್ಮವಿಶ್ವಾಸ ಸ್ವಾರ್ಥಪೂರಿತವಾಗಿರಬಾರದು. ಈ ಬಗ್ಗೆ ಸ್ವಾಮೀಜಿ ಹೀಗೆ ವಿವರಣೆ ನೀಡುತ್ತಾರೆ: ಆತ್ಮಪ್ರೀತಿ ಎಂದರೆ ಎಲ್ಲರ ಮೇಲೂ ಪ್ರೀತಿ, ಎಲ್ಲ ಪ್ರಾಣಿಗಳ ಮೇಲೂ ಪ್ರೀತಿ, ಎಲ್ಲದರ ವಿಷಯದಲ್ಲೂ ಪ್ರೀತಿ. ಏಕೆಂದರೆ ನಾವುಗಳೆಲ್ಲ ಒಂದು ಎಂಬ ಈ ಮಹಾವಿಶ್ವಾಸವೇ ಜಗತ್ತನ್ನು ಮೇಲಕ್ಕೆ ತರಬಲ್ಲದು. ಇದೇ ಧರ್ಮದ ತಿರುಳು. ವಿಶ್ವದ ಏಕತ್ವ ಮತ್ತು ಆತ್ಮಶ್ರದ್ಧೆ – ಇವುಗಳಿಗಿಂತ ಹೆಚ್ಚಾಗಿ ಧರ್ಮದಲ್ಲಿ ಬೋಧಿಸುವುದು ಇನ್ನೇನಿದೆ ಎಂದು ಸ್ವಾಮೀಜಿ ಪ್ರಶ್ನಿಸುತ್ತಾರೆ. ಧರ್ಮವು ಮಾನವ ಜನಾಂಗಕ್ಕೆ ಸಹಕಾರಿಯಾಗಬೇಕಾದರೆ, ಮಾನವನು ಎಂತಹ ಮಟ್ಟದಲ್ಲಿದ್ದರೂ, ಅದು ಅವನ ಸಹಾಯಕ್ಕೆ ಬರಬೇಕು. ಅಂತಹ ಧರ್ಮವನ್ನು ವೇದಾಂತವು ಬೋಧಿಸುತ್ತದೆ. ಸತ್ಯದ ಪರೀಕ್ಷೆ ಎಂದರೆ ಪರಿಶುದ್ಧತೆ ಮತ್ತು ಏಕತ್ವ. ಏಕತೆಗೆ ಯಾವುದು ಸಹಾಯ ಮಾಡುವುದೋ ಅದೆಲ್ಲವೂ ಸತ್ಯ. ಈ ದೃಷ್ಟಿಯಿಂದ ನೋಡುವುದಾದರೆ ಪ್ರೀತಿಯೇ ಸತ್ಯ, ದ್ವೇಷವೇ ಅಸತ್ಯ. ಪ್ರೇಮವು ಒಂದುಗೂಡಿಸುತ್ತದೆ, ಐಕ್ಯತೆಗೆ ಕಾರಣವಾಗುತ್ತದೆ. ದ್ವೇಷವು ಭಿನ್ನತೆಗೆ, ಪ್ರತ್ಯೇಕತೆಗೆ ಕಾರಣವಾಗುತ್ತದೆ. ಪ್ರೇಮವೇ ಅಸ್ತಿತ್ವ, ಅದೇ ಪ್ರತ್ಯಕ್ಷ ದೇವರು.

**ವೇದಾಂತದ ದೇವರು:** ಈ ಐಕ್ಯಭಾವನೆಯೇ ಆತ್ಮದ ಕಲ್ಪನೆಯ ತಿರುಳು. ಹೀಗಾಗಿ ವೇದಾಂತ ಹೇಳುತ್ತದೆ, ಆತ್ಮದ ಅರಿವಿನೊಂದಿಗೇ ನಾವು ಬದುಕುತ್ತಿದ್ದೇವೆ, ಉಸಿರಾಡುತ್ತಿದ್ದೇವೆ ಎಂದು. ಇದೇ ಎಲ್ಲ ದೇವತೆಗಳಿಗಿಂತಲೂ ಅತಿ ಹತ್ತಿರವಾದ, ಪ್ರಿಯವಾದ ದೇವರು. ಇದನ್ನೇ ವೇದಾಂತ ಬೋಧಿಸುವುದು. ಸರ್ವವ್ಯಾಪಿಯಾದ, ಸರ್ವ ಶಕ್ತನಾದ, ನಮ್ಮೆಲ್ಲರ ಆತ್ಮದ ಆತ್ಮವಾದ ದೇವರನ್ನೇ ವೇದಾಂತವು ಬೋಧಿಸುತ್ತದೆ. ಸ್ವಾಮೀಜಿಯವರ ಪ್ರಕಾರ ಇದೇ ಅನುಷ್ಠಾನಕ್ಕೆ ಯೋಗ್ಯವಾದ ದೇವರನ್ನು ಬೋಧಿಸುವ ವಿಧಾನ. ಈ ಐಕ್ಯತೆಯ ಆದರ್ಶಕ್ಕೆ ಸ್ಪಂದಿಸುವುದೇ ಹೃದಯವಂತಿಕೆ. ಎಲ್ಲದರಲ್ಲೂ ಏಕತ್ವವನ್ನು ಕಂಡು, ದೇವರನ್ನು ತನ್ನಲ್ಲಿ ಕಂಡು, ಇತರರಲ್ಲಿಯೂ ಕಾಣುವ ಮಹೋನ್ನತ ಪೀಠಕ್ಕೆ ಕೊಂಡೊಯ್ಯುವುದೇ ಹೃದಯವಂತಿಕೆ. ನಾವು ಇತರರಿಗೆ ಮಾಡಬಹುದಾದ ನಿಜವಾದ ಸಹಾಯವೆಂದರೆ ಈ ಹೃದಯವಂತಿಕೆಯೇ ಎನ್ನುತ್ತಾರೆ ಸ್ವಾಮೀಜಿ. ಅವರ ಪ್ರಕಾರ, **"ಕ್ರಿಸ್ತನಂತೆ ನೀವು ಇತರರಿಗಾಗಿ ಮರುಗಬಲ್ಲವರಾದರೆ ಕ್ರಿಸ್ತರಾಗುವಿರಿ. ಬುದ್ಧನಂತೆ ಹಾಗೆ ಮಾಡಿದರೆ ಬುದ್ಧರಾಗುವಿರಿ. ಒಟ್ಟಿನಲ್ಲಿ ಹೃದಯವಂತಿಕೆಯೇ ಜೀವಶಕ್ತಿ ಮತ್ತು ಪೌರುಷ."**

**ಧರ್ಮದ ಅನುಷ್ಠಾನಸಾಧ್ಯತೆ :** ಅನುಷ್ಠಾನ ವೇದಾಂತದ ಎರಡನೆಯ ಪ್ರವಚನದಲ್ಲಿ ಸ್ವಾಮೀಜಿ ಈ ಅಂಶಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಅದಕ್ಕಾಗಿ ಅವರು ಛಾಂದೋಗ್ಯ ಉಪನಿಷತ್ತಿನ ಎರಡು ಕಥೆಗಳನ್ನು ಹೇಳುತ್ತಾರೆ. ಜಾಬಾಲ ಸತ್ಯಕಾಮನು ಗುರುಕುಲಕ್ಕೆ ಸೇರಿಕೊಂಡದ್ದು, ಅವನು ಪಡೆದುಕೊಂಡ ವಿದ್ಯಾಭ್ಯಾಸದ ಕ್ರಮ – ಈ ಕಥೆಯನ್ನು ಮೊದಲು ಹೇಳುತ್ತಾರೆ. ಮುಂದುವರೆದು, ಸತ್ಯಕಾಮನ ಶಿಷ್ಯನಾದ ಉಪಕೋಸಲನೆಂಬ ಬಾಲಕನು ಬ್ರಹ್ಮನನ್ನು ಅರಿತುಕೊಂಡ ಕಥೆಯನ್ನೂ ವರ್ಣಿಸುತ್ತಾರೆ. ಇವೆರಡು ಕಥೆಗಳಲ್ಲೂ, ಅನುಷ್ಠಾನ ಧರ್ಮದ ಭಾವನೆಯನ್ನೇ ನಾವು ಕಾಣುತ್ತೇವೆ. ಇವುಗಳಲ್ಲಿ ಆ ಕಾಲದಲ್ಲಿ ಆರಾಧನೆಯ ಸಂಕೇತಗಳಾಗಿದ್ದ ಅಗ್ನಿ, ಸೂರ್ಯ, ಚಂದ್ರ ಮುಂತಾದವುಗಳೇ ಶಿಷ್ಯನಾದವನಿಗೆ ಒಂದು ಉನ್ನತವಾದ ಆದರ್ಶವನ್ನು ಬೋಧಿಸುತ್ತವೆ. ಸ್ವಾಮೀಜಿಯವರ ಪ್ರಕಾರ, ಇದೇ ನಿಜವಾಗಿಯೂ ವೇದಾಂತದ ಅನುಷ್ಠಾನ ಭಾಗ. "ಇದು ಪ್ರಪಂಚವನ್ನು ನಾಶಮಾಡುವುದಿಲ್ಲ, ಆದರೆ ಅದನ್ನು ವಿವರಿಸುತ್ತದೆ. ಮಾನವನ ವೈಶಿಷ್ಟ್ಯವನ್ನು ನಾಶಮಾಡುವುದಿಲ್ಲ. ಆದರೆ ಅವನ ನಿಜವಾದ ವೈಶಿಷ್ಟ್ಯವನ್ನು ತೋರಿ ವಿವರಿಸುತ್ತವೆ." ಹೀಗೆ ಸಕಲ ವಸ್ತುಗಳಲ್ಲಿಯೂ ದೇವರನ್ನು ನೋಡುವುದು, ವಸ್ತುಗಳು ನಮಗೆ (ಮೇಲ್ನೋಟಕ್ಕೆ) ಗೋಚರವಾಗುವಂತೆ ನೋಡದೆ, ಅವುಗಳ ಸತ್ಯಾಂಶವನ್ನು ಮನಗಾಣಿಸುವುದು – ಇದೇ ವೇದಾಂತದ ಗುರಿ.